






# ಹೊಸ ಲಯದ ಪಾಂಡ್ಯ

ನಾಲ್ಕು ತಿಂಗಳು ಹಾಸಿಗೆ ಮೇಲೆ ವಿರಮಿಸಿ ಎದ್ದು, ದಿನವೂ ಬೆಳಿಗ್ಗೆ 5ಕ್ಕೇ ತರಬೇತಿಗೆ ಹಾಜರಾಗುತ್ತಿದ್ದ ಹಾರ್ದಿಕ್ ಪಾಂಡ್ಯ ಈಗ ಹೊಸಬರಂತೆ ಕಾಣುತ್ತಿದ್ದಾರೆ. ಬೆನ್ನುನೋವು ನೀಗಿಕೊಂಡ ಮೇಲಿನ ಅವರ ಬೌಲಿಂಗ್ ಚಿತ್ತಾಪಹಾರಿಯಾಗಿದೆ.

■ ವಿಶಾಖ ಎನ್.

ಹೋದ ವರ್ಷ ಇಂಗ್ಲೆಂಡಿನ ಓಲ್ಡ್ ಟ್ರಾಫೋರ್ಡ್‌ನಲ್ಲಿ ಹಾರ್ದಿಕ್ ಪಾಂಡ್ಯ 24 ರನ್ ಕೊಟ್ಟು 4 ವಿಕೆಟ್‌ಗಳನ್ನು ಪಡೆದರು. ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಅದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ. ಇಂಗ್ಲೆಂಡ್ ಎದುರು ಆ ಪಂದ್ಯದಲ್ಲಿ 55 ಎಸೆತಗಳಲ್ಲಿ 71 ರನ್ ಹೊಡೆದು 260 ರನ್‌ಗಳ ಲಕ್ಷ್ಯ ಮುಟ್ಟುವಲ್ಲಿ ಅವರ ಕೊಡುಗೆ ಅವಿಸ್ಮರಣೀಯ. ಭಾರತ ಆಗ ಸರಣಿಯನ್ನೂ ತನ್ನದಾಗಿಸಿಕೊಂಡು ಬೀಗಿತ್ತು. ವಾರದ ಹಿಂದೆ ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಕೂಡ ಅವರು ಆಸ್ಟ್ರೇಲಿಯಾದಿಂದ ಬಹುತೇಕ ಸರಣಿಯನ್ನು ಕಿತ್ತುಕೊಂಡಿದ್ದರು. ಬೌಲಿಂಗ್‌ನಲ್ಲಿ 44 ರನ್ನಿತ್ತು 3 ವಿಕೆಟ್ ಪಡೆದದ್ದೇ ಅಲ್ಲದೆ 40 ಎಸೆತಗಳಲ್ಲಿ ಅಷ್ಟೇ ರನ್‌ಗಳನ್ನೂ ಗಳಿಸಿದರು. ಅವರು ಔಟಾದ ನಂತರ ಪಂದ್ಯದ ಮೇಲೆ ಇದ್ದ ಭಾರತ ಗೆಲ್ಲುವ ಆಸೆಯೂ ಮುರುಟಿಹೋಯಿತು.

ಹಾರ್ದಿಕ್ ನೀಳಕಾಯದ ಯುವಕ. ಬ್ಯಾಟಿಂಗ್‌ನಲ್ಲಿ ಅವರು ದೂರದ ಬೌಂಡರಿ ಗೆರೆಯನ್ನೂ ದಾಟುವಂತೆ ಹೇಗೆ ಲೀಲಾಜಾಲವಾಗಿ ಚೆಂಡನ್ನು ಹೊಡೆಯಬಲ್ಲರು ಎನ್ನುವುದನ್ನು ಕಂಡಿದ್ದೇವೆ. ಈಗ ಅವರು ಬೌಲಿಂಗ್‌ನಲ್ಲೂ ಲಯದರ್ಶನ ಮಾಡಿಸುತ್ತಿರುವುದು ಗಮನಾರ್ಹ.

ಹೋದ ವರ್ಷ ಇಂಗ್ಲೆಂಡ್ ಎದುರು ಏಕದಿನ ಪಂದ್ಯಗಳ ಸರಣಿ ಗೆದ್ದಾಗ ಭಾರತದ ಮಾಜಿ ಆಟಗಾರ ಆರ್.ಪಿ. ಸಿಂಗ್ ಅವರ ಬೌಲಿಂಗ್ ಅನ್ನು ವಿಶ್ಲೇಷಿಸಿದ್ದರು. ಬೆನ್ನುನೋವು ಅನುಭವಿಸಿ, ಶಸ್ತ್ರಚಿಕಿತ್ಸೆ ನಂತರ ಹಾರ್ದಿಕ್ ಚೇತರಿಸಿಕೊಂಡು ಬಂದ ನಂತರ ಅವರ ಬೌಲಿಂಗ್‌ನಲ್ಲಿ ಹೊಸ ಛಾಪು ಮೂಡಿದೆ ಎನ್ನುವುದು ಅವರ ಹೊಗಳಿಕೆಯ ನುಡಿ. ಗಾಯಗೊಳ್ಳುವ ಮೊದಲೂ ಹಾರ್ದಿಕ್ ದಿಢೀರನೆ ಬೌನ್ಸರ್ ಹಾಕಿ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸುತ್ತಿದ್ದರು. ಈಗ ಅವರ ಆ ಅಸ್ತ್ರ ಇನ್ನೂ ಮೊನಚಾಗಿದೆ. ಒಟ್ಟಾರೆ ಅವರ ಬೌಲಿಂಗ್ ಶೈಲಿಯಲ್ಲೇ ಅದ್ಭುತವಾದ ಲಯವೊಂದು ಹೊಮ್ಮತೊಡಗಿದೆ ಎಂದು ಆರ್.ಪಿ. ಸಿಂಗ್ ವಿಶ್ಲೇಷಿಸಿದ್ದರು.

ಪ್ರಜ್ಞಾನ್ ಓಝಾ ಕೂಡ ಹಾರ್ದಿಕ್‌ರ ಬೌಲಿಂಗ್ ಬದಲಾವಣೆಗೆ ಕನ್ನಡಿ ಹಿಡಿದಿದ್ದಾರೆ. ಹೊಳಪು ಕಳೆದುಕೊಂಡ ಚೆಂಡಿನಲ್ಲಿ ಬೌನ್ಸರ್ ಅಥವಾ ಪರಿಣಾಮಕಾರಿ ಶಾರ್ಟ್ ಬಾಲ್ ಹಾಕುವುದು ಕಷ್ಟ. ಹಾರ್ದಿಕ್ ಅದನ್ನು ಈಗ ಕಣ್ಣಿಗೆ ಕಟ್ಟುವಂತೆ ಪ್ರಯೋಗಿಸಿ, ಗೆಲ್ಲುತ್ತಿದ್ದಾರೆ ಎನ್ನುವುದು ಓಝಾ ಗಮನಿಸಿರುವ ಅಂಶ.



ಹಾರ್ದಿಕ್ ಪಾಂಡ್ಯ 2018ರಲ್ಲಿ ಬೆನ್ನುನೋವಿನಿಂದ ನರಳಿದ್ದಾಗ, ಚೇತರಿಸಿಕೊಂಡು ರಣಜಿ ಕ್ರಿಕೆಟ್‌ನಲ್ಲಿ ಆಡಿ ಸಾಣೆಗೆ ಒಡ್ಡಿಕೊಂಡಿದ್ದರು.

ಕಳೆದ ವರ್ಷ 'ಇಂಡಿಯನ್ ಪ್ರೀಮಿಯರ್ ಲೀಗ್'(ಐಪಿಎಲ್)ನಲ್ಲಿ ಗುಜರಾತ್ ತಂಡವನ್ನು ಮುನ್ನಡೆಸಿದರು. ಆಗ ನಾಯಕತ್ವದ ನೊಗವನ್ನೂ ಯಶಸ್ವಿಯಾಗಿ ಹೊತ್ತು, 483 ರನ್‌ಗಳ ಕಾಣಿಕೆ ಸಲ್ಲಿಸಿದ್ದರು. ಕಪ್ ಎತ್ತಿ ಹಿಡಿಯಲು ಅಷ್ಟು ಸಾಕಾಯಿತು. ಲಖನೌ ತಂಡದ ಎದುರಿನ ಪಂದ್ಯದಲ್ಲಿ ಅವರು ನಾಲ್ಕು ಓವರ್‌ಗಳನ್ನು ಬೌಲ್ ಮಾಡಿದಾಗ ಎಲ್ಲರ ಕಣ್ಣುಗಳು ಅವರ ಮೇಲೆ ನೆಟ್ಟಿದ್ದವು. ಅವರ ಬೆನ್ನುನೋವು ಮರುಕಳಿಸಿದರೆ ಏನು ಗತಿ ಎನ್ನುವ ಆತಂಕ ಎಲ್ಲರಲ್ಲಿ. ಆಗ ಹಾರ್ದಿಕ್ ಕೂಡ ತಮ್ಮಲ್ಲಿ ಬೌಲಿಂಗ್ ಮಾಡುವ ಉತ್ಸಾಹ ಇದೆ ಎಂದು ತೋರಿದ್ದರು.

ಹಳೆಯ ಚೆಂಡಿನಲ್ಲಿ ಬೌನ್ಸರ್ ಹಾಗೂ ಕೆಣಕುವಂತಹ ಶಾರ್ಟ್ ಪಿಚ್ ಎಸೆತಗಳನ್ನು ಹಾಕುವುದು ಕೌಶಲ. ಇಂಗ್ಲೆಂಡ್‌ನ ಪರಮ ವೇಗದ ಬೌಲರ್‌ಗಳೂ ಅದರ ಪ್ರಯೋಗಕ್ಕೆ ಹೆದರುತ್ತಿರುತ್ತಾರೆ. ಮೊನ್ನೆ, ಆಸ್ಟ್ರೇಲಿಯಾ ಬ್ಯಾಟ್ಸ್‌ಮನ್‌ಗಳೂ ಪಾಂಡ್ಯ ಎಸೆತಗಳ ಮರ್ಮ ಅರಿಯದೇ ಹೋದರು. ಟ್ರಾವಿಸ್ ಹೆಡ್ ತಲೆ ಮೇಲೆ ಹೊಡೆಯಲು ಹೋದಾಗಲೇ ಇದು ಗೊತ್ತಾಯಿತು. ಆಮೇಲೆ ಮಾರ್ಷ್, ನಾಯಕ ಸ್ಮಿತ್ ಕೂಡ ದಂಡ ತೆತ್ತರು. ಸತತವಾಗಿ ಮೂರು ಓವರ್‌ಗಳಲ್ಲಿ ಹಾರ್ದಿಕ್ ಕಿತ್ತ ಆ ಮೂರು ವಿಕೆಟ್‌ಗಳು ಅವರ ಬೌಲಿಂಗ್ ಪ್ರಾಮುಖ್ಯಕ್ಕೆ ಸಾಕ್ಷಿ.

ಏಕದಿನ ವಿಶ್ವಕಪ್‌ಗೆ ತಾಲೀಮು ಶುರುವಾಗಿರುವ ಈ ಹೊತ್ತಲ್ಲಿ ಪಾಂಡ್ಯ ಬೌಲಿಂಗ್ ಲಯ ಭಾರತಕ್ಕೆ ಈಗ ಅನಿವಾರ್ಯವೇ ಆಗಿದೆ.

ಪ್ರತಿಕ್ರಿಯಿಸಿ: feedback@sudha.co.in